# All India Radio: Bangalore
# National Bulletin In Kannada
# 22.09.2025 1.10 pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**22.09.2025 1.10 pm**

**<><><><>**

ಮುಖ್ಯಾಂಶಗಳು

೧. ಅರುಣಾಚಲ ಪ್ರದೇಶದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ

೨. ನ್ಯೂಯಾರ್ಕ್‌ನಲ್ಲಿ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಫಿಲಿಫೈನಲ್ಸ್ ವಿದೇಶಾಂಗ ಕಾರ್ಯದರ್ಶಿ ಭೇಟಿ

೩. ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಶ್ರೀಲಂಕಾ ಪ್ರವಾಸ ; ಇಂದಿನಿಂದ ಆರಂಭ

೪. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮೊರಾಕೊ ಪ್ರವಾಸ ; ರಬಾತ್‌ನಲ್ಲಿ ಅನಿವಾಸಿ ಭಾರತೀಯರೊಂದಿಗೆ ಸಂವಾದ

*************

ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರಿಂದು ಇಟಾನಗರದಲ್ಲಿ ಮೂರು ಸಾವಿರದ ೭೦೦ ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಎರಡು ಪ್ರಮುಖ ಜಲವಿದ್ಯುತ್ ಯೋಜನೆಗಳಿಗೆ ಶಂಕುಸ್ಥಾಪನೆ ಸೇರಿದಂತೆ ಐದು ಸಾವಿರದ ನೂರು ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ನೆರವೇರಿಸಿದರು. ಭೇಟಿಯ ಭಾಗವಾಗಿ ಪ್ರಧಾನಿ, ಇತ್ತೀಚಿನ ಜಿಎಸ್‌ಟಿ ದರ ಪರಿಷ್ಕರಣೆಯ ಪರಿಣಾಮದ ಕುರಿತು ಸ್ಥಳೀಯ ತೆರಿಗೆದಾರರು, ವ್ಯಾಪಾರಿಗಳು ಮತ್ತು ಕೈಗಾರಿಕಾ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿದರು. ನಂತರ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಕಳೆದ ದಶಕದಲ್ಲಿ ಇಲ್ಲಿಗೆ ಆಗಮಿಸುವ ಪ್ರವಾಸಿಗರ ಸಂಖ್ಯೆ ದ್ವಿಗುಣಗೊಂಡಿದೆ. ಅರುಣಾಚಲಪ್ರದೇಶದ ಸಾಮರ್ಥ್ಯ ಪ್ರಕೃತಿ ಮತ್ತು ಸಂಸ್ಕೃತಿ ಪ್ರವಾಸೋದ್ಯಮವನ್ನು ಮೀರಿ ವಿಸ್ತರಿಸಿದೆ. ಇತ್ತೀಚೆಗೆ ವಿಷಯಾಧಾರಿತ ಪ್ರವಾಸೋದ್ಯಮ

ಜಾಗತಿಕವಾಗಿ ಪ್ರವರ್ಧಮಾನಕ್ಕೆ ಬರುತ್ತಿದೆ. ಆದ್ದರಿಂದ ತವಾಂಗ್‌ನಲ್ಲಿ ನಿರ್ಮಿಸಲಾಗುತ್ತಿರುವ ಆಧುನಿಕ ಸಮುದಾಯ ಭವನ ಅರುಣಾಚಲಪ್ರದೇಶದ ಪವಾಸೋದ್ಯಮಕ್ಕೆ ಹೊಸ ಆಯಾಮ ನೀಡಲಿದೆ ಎಂದರು. ನಮ್ಮ ಸರ್ಕಾರಕ್ಕೆ ರಾಷ್ಟ್ರ ಮೊದಲು ಎಂಬುದೇ ಧ್ಯೇಯವಾಕ್ಯವಾಗಿದೆ. ೨೦೧೪ರ ಬಳಿಕ ಈಶಾನ್ಯ ಪ್ರದೇಶವನ್ನು ಅಭಿವೃದ್ಧಿಯ ಕೇಂದ್ರವನ್ನಾಗಿ ಮಾಡಲಾಗಿದೆ ಎಂದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ (೩೦ ಸೆಕೆಂಡ್‌ಗಳು)**

ಮಧ್ಯಹ್ನ ತ್ರಿಪುರಾಗೆ ಪ್ರವಾಸ ಕೈಗೊಳ್ಳಲಿರುವ ಪ್ರಧಾನಿ ತೀರ್ಥಕ್ಷೇತ್ರ ಪುನರುಜ್ಜೀವನ ಮತ್ತು ಆಧ್ಯಾತ್ಮಿಕ ಪರಂಪರೆ ವೃದ್ಧಿ ಯೋಜನೆಯಡಿಯಲ್ಲಿ ಮತಾಬರಿಯಲ್ಲಿರುವ ಮಾತಾ ತ್ರಿಪುರಸುಂದರಿ ದೇವಾಲಯ ಸಂಕೀರ್ಣದ ಅಭಿವೃದ್ಧಿಕಾರ್ಯ ಉದ್ಘಾಟಿಸಲಿದ್ದಾರೆ. ತ್ರಿಪುರಾದ ಗೋಮತಿ ಜಿಲ್ಲೆಯ ಉದಯ್‌ಪುರ ಪಟ್ಟಣದಲ್ಲಿರುವ ಈ ದೇವಾಲಯ ಪ್ರಾಚೀನ ೫೧ ಶಕ್ತಿಪೀಠಗಳಲ್ಲಿ ಒಂದು.

*************

ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ನವದೆಹಲಿಯಲ್ಲಿಂದು ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್ ಶೀರ್ಷಿಕೆಯ ಪ್ರಧಾನಿ ನರೇಂದ್ರ ಮೋದಿ ಅವರ ಆಯ್ದ ಭಾಷಣಗಳ ಸಂಕಲನ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ದೇಶಾದ್ಯಂತ ಮತ್ತು ವಿದೇಶಗಳಲ್ಲಿ ಲಕ್ಷಾಂತರ ಜನರಿಗೆ ಸ್ಫೂರ್ತಿಯಾಗಿದ್ದಾರೆ. ಅವರ ಎರಡನೇ ಅವಧಿಯ ೪ ಮತ್ತು ೫ನೇ ವರ್ಷಗಳ ಆಯ್ದ ಭಾಷಣಗಳನ್ನು ಒಳಗೊಂಡಿರುವ ಈ ಪುಸ್ತಕಗಳು, ಅವರ ಉತ್ತಮ ಆಡಳಿತದ ದೃಷ್ಟಿಕೋನ ಮತ್ತು ವಿಧಾನವನ್ನು ಹಲವು ವಿಧಗಳಲ್ಲಿ ವ್ಯಕ್ತಪಡಿಸುತ್ತವೆ ಎಂದು ಅವರು ಹೇಳಿದರು.

**ಧ್ವನಿ : ಸಿ.ಪಿ. ರಾಧಾಕೃಷ್ಣನ್ ( ೨೨ ಸೆಕೆಂಡುಗಳು)**

ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, ಪ್ರಧಾನಿಯವರು, ರಾಜಕೀಯವನ್ನು ಜನರಿಗೆ ಸೇವೆ ಸಲ್ಲಿಸುವ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದಾರೆ. ಅವರ ನೇತೃತ್ವದಲ್ಲಿ ಭಾರತ ವಿಶ್ವದ ಅತಿದೊಡ್ಡ ಆಹಾರ ಭದ್ರತಾ ಕಾರ್ಯಕ್ರಮವನ್ನು ಜಾರಿಗೆ ತರುತ್ತಿದೆ ಎಂದು ಅವರು ಮಾಹಿತಿ ನೀಡಿದರು. ರಾಜ್ಯಸಭೆಯ ಉಪಾಧ್ಯಕ್ಷ ಹರಿವಂಶ್ ಮತ್ತು ಮಾಹಿತಿ ಮತ್ತು ಪ್ರಸಾರ ಕಾರ್ಯದರ್ಶಿ ಸಂಜಯ್ ಜಾಜು ಕೂಡ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

*************

ನ್ಯೂಯಾರ್ಕ್‌ನಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ೮೦ನೇ ಅಧಿವೇಶನಕ್ಕೂ ಮುನ್ನ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಇಂದು ಫಿಲಿಪೈನ್ಸ್ ವಿದೇಶಾಂಗ ಕಾರ್ಯದರ್ಶಿ ಥೆರೆಸಾ ಲಜಾರೊ ಅವರನ್ನು ಭೇಟಿ ಮಾಡಿದರು. ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನಾಂಡ್ ಆರ್ ಮಾರ್ಕೋಸ್ ಜೂನಿಯರ್ ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ ನಂತರ, ಇಬ್ಬರೂ ನಾಯಕರು ವಿಶ್ವಸಂಸ್ಥೆ ಮತ್ತು ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಭಾರತ ಮತ್ತು ಫಿಲಿಪೈನ್ಸ್ ನಡುವಿನ ಸಹಕಾರದ ಕುರಿತು ಚರ್ಚಿಸಿದರು. ಯುಎನ್‌ಜಿಎ ೮೦ರ ಆರಂಭದಲ್ಲಿ ಫಿಲಿಪೈನ್ಸ್‌ನ ವಿದೇಶಾಂಗ ಕಾರ್ಯದರ್ಶಿ ಥೆರೆಸಾ ಲಜಾರೊ ಅವರನ್ನು ಭೇಟಿ ಮಾಡಲು ಸಂತೋಷವಾಗಿದೆ ಎಂದು ಸಚಿವ ಜೈಶಂಕರ್ ಸಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

*************

ಇಂದಿನಿಂದ ನಾಲ್ಕು ದಿನಗಳಿಗಾಗಿ ನೌಕಾಪಡೆ ಸಿಬ್ಬಂದಿ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಶ್ರೀಲಂಕಾ ಪ್ರವಾಸ ಕೈಗೊಳ್ಳಲಿದ್ದು, ಶ್ರೀಲಂಕಾ ಪ್ರಧಾನಿ ಡಾ. ಹರಿಣಿ ಅಮರ ಸೂರಿಯಾ ಅವರೊಂದಿಗೆ ಸಭೆ ನಡೆಸಲಿದ್ದಾರೆ.

ನೌಕಾಪಡೆ ಮುಖ್ಯಸ್ಥರು, ಕೊಲಂಬೋದಲ್ಲಿ 'ಬದಲಾಗುತ್ತಿರುವ ಕಾರ್ಯತಂತ್ರದ ಅಡಿಯಲ್ಲಿ ಹಿಂದೂಮಹಾಸಾಗರದ ಕಡಲ ದೃಷ್ಟಿಕೋನ' ಕುರಿತು ನಡೆಯಲಿರುವ ೧೨ನೇ ಗ್ಯಾಲೆ ಸಂವಾದ-೨೦೨೫ ಅಂತಾರಾಷ್ಟ್ರೀಯ ಕಡಲ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ಭೇಟಿಯು ಭಾರತ-ಶ್ರೀಲಂಕಾ ನಡುವಿನ ಪರಸ್ಪರ ಗೌರವ ವಿಶ್ವಸಾರ್ಹತೆ ಮತ್ತು ಸ್ಥಿರತೆಯ ಹಂಚಿಕೆಯ ದೃಷ್ಟಿಕೋನದ ಮೇಲೆ ಆಧರಿತ ಪಾಲುದಾರಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

*************

ಮೊರಾಕೊಗೆ ತಮ್ಮ ಐತಿಹಾಸಿಕ ಎರಡು ದಿನಗಳ ಅಧಿಕೃತ ಭೇಟಿಯ ಮೊದಲ ದಿನದಂದು, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ರಬಾತ್‌ನಲ್ಲಿರುವ ಅನಿವಾಸಿ ಭಾರತೀಯರೊಂದಿಗೆ ಸಂವಾದ ನಡೆಸಿದರು. ಇದೇ ವೇಳೆ, ಅಲ್ಲಿರುವ ಭಾರತೀಯರು, ಆ ದೇಶ ಮತ್ತು ತಾಯ್ನಾಡಿಗೆ ನೀಡುತ್ತಿರುವ ಕೊಡುಗೆಗಳ ಕುರಿತು ಶ್ಲಾಘನೆ ವ್ಯಕ್ತಪಡಿಸಿದರು. ಈ ಭೇಟಿಯು ಉತ್ತರ ಆಫ್ರಿಕಾದ ರಾಷ್ಟ್ರಕ್ಕೆ ಭಾರತೀಯ ರಕ್ಷಣಾ ಸಚಿವರೊಬ್ಬರು ನೀಡಿದ ಮೊದಲ ಭೇಟಿಯಾಗಿದೆ, ಇದು ಭಾರತ

ಮತ್ತು ಮೊರಾಕೊ ನಡುವಿನ ಕಾರ್ಯತಂತ್ರದ ಸಂಬಂಧಗಳು ಬಲಗೊಳ್ಳುತ್ತಿರುವ ಸೂಚಕವಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಅವರು, ಕಳೆದ ದಶಕದಲ್ಲಿ ಆರ್ಥಿಕತೆ, ಉತ್ಪಾದನೆ, ತಂತ್ರಜ್ಞಾನ, ಸ್ಟಾರ್ಟ್‌ಅಪ್‌ಗಳು, ಡಿಜಿಟಲ್ ಕ್ರಾಂತಿ ಮತ್ತು ರಕ್ಷಣಾ ಸಾಮರ್ಥ್ಯಗಳು ಸೇರಿದಂತೆ ಬಹು ಆಯಾಮಗಳಲ್ಲಿ ಭಾರತದ ಪರಿವರ್ತನಾ ಪಯಣದ ಕುರಿತು ಮಾಹಿತಿ ಹಂಚಿಕೊಂಡಿರು.

ತಮ್ಮ ಭೇಟಿಯ ಸಮಯದಲ್ಲಿ, ರಾಜನಾಥ್ ಸಿಂಗ್ ಅವರು ಮೊರಾಕೊದ ರಕ್ಷಣಾ ಸಚಿವ ಅಬ್ದೆಲ್ಟಿಫ್ ಲೌಡಿಯಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ ಮತ್ತು ಕೈಗಾರಿಕಾ ಸಹಯೋಗಕ್ಕಾಗಿ ಹೊಸ ಮಾರ್ಗಗಳನ್ನು ಅನ್ವೇಷಿಸಲು ಮೊರಾಕೊದ ಕೈಗಾರಿಕೆ ಮತ್ತು ವ್ಯಾಪಾರ ಸಚಿವ ರಿಯಾದ್ ಮೆಜ್ಜೌರ್ ಅವರನ್ನು ಭೇಟಿ ಮಾಡಲಿದ್ದಾರೆ.

*************

ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಧ್ಯೇಯದೊಂದಿಗೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ದೇಶದಲ್ಲಿ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿರತವಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ ವಿಶೇಷ ಸರಣಿ - "ಸೇವಾ ಪರ್ವ" ದಲ್ಲಿಂದು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಲಕ್ಷಾಂತರ ಜನರ ಬದುಕನ್ನು ಸುಲಭಗೊಳಿಸುವ ನಿಟ್ಟಿನಲ್ಲಿ ಹೇಗೆ ಕೈಗೆಟಕುವ ವಸತಿ ಮತ್ತು ಆಧುನಿಕ ನಗರ ಮೂಲಸೌಕರ್ಯವನ್ನು ಖಚಿತಪಡಿಸಿದೆ ಎಂಬುದರ ಕುರಿತ ಒಂದು ವಿಶೇಷ ವರದಿ ಇದೀಗ ಮೂಡಿಬರಲಿದೆ.

**ವರದಿ : ಅಭಯ್ (೧ ನಿಮಿಷ ೧೪ ಸೆಕೆಂಡ್‌ಗಳು)**

ಕಳೆದ ಹನ್ನೊಂದು ವರ್ಷಗಳಿಂದ ಒಂದು ನಿಶ್ಚಿತ ಸಂಕಲ್ಪದೊಂದಿಗೆ ಆಡಳಿತ ನಡೆಸುತ್ತಿರುವ ಕೇಂದ್ರ ಸರ್ಕಾರ, ದೇಶದಾದ್ಯಂತ ಪರಿವರ್ತನೆಯ ಬೀಜಗಳನ್ನು ಬಿತ್ತಿದೆ. ನಾಗರಿಕ ಕೇಂದ್ರಿತ ಸುಧಾರಣೆಗಳ ಮೂಲಕ, ಜೀವನವನ್ನು ಹೆಚ್ಚು ಸರಳ, ಸುಲಭಗೊಳಿಸಲು ಪ್ರಯತ್ನಿಸಿದೆ. ಈ ಎಲ್ಲಾ ಪ್ರಯತ್ನಗಳಲ್ಲಿ ಕೈಗೆಟಕುವ ವಸತಿ ಕೇಂದ್ರಬಿಂದುವಾಗಿದೆ. ಈ ದೃಷ್ಟಿಕೋನದೊಂದಿಗೆ, ಸರ್ಕಾರ, ಪ್ರಧಾನಮಂತ್ರಿ ಆವಾಸ್ ಯೋಜನೆ - ನಗರ ಮತ್ತು ಪ್ರಧಾನಮಂತ್ರಿ ಆವಾಸ್ ಯೋಜನೆ - ಗ್ರಾಮೀಣ ಎಂಬ ಎರಡು ಪ್ರಮುಖ ಯೋಜನೆಗಳನ್ನು ರೂಪಿಸಿದೆ. ಈಗಾಗಲೇ ಒಟ್ಟು ೧.೫ ಲಕ್ಷ ಕೋಟಿ ಮೌಲ್ಯದ ೭ ಸಾವಿರ ೫೦೦ ಕ್ಕೂ ಹೆಚ್ಚು ಯೋಜನೆಗಳು, ಈ ಮಿಷನ್ ಅಡಿಯಲ್ಲಿ

ಪೂರ್ಣಗೊಂಡಿವೆ. ಅಮೃತ್ ಮತ್ತು ಅಮೃತ್ ೨.೦ ಯೋಜನೆಗಳು, ಲಕ್ಷಾಂತರ ಜನರಿಗೆ ಶುದ್ಧ ಕುಡಿಯುವ ನೀರು ಹಾಗೂ ಒಳಚರಂಡಿ ಸಂಪರ್ಕಗಳನ್ನು ಒದಗಿಸಿ, ನೂರಾರು ಹಸಿರು ಉದ್ಯಾನಗಳು, ನದಿಗಳ ಪುನಶ್ಚೇತನ, ಹಾಗೂ ಎಲ್ಇಡಿ ಬೀದಿ ದೀಪಗಳ ಮೂಲಕ ನಗರ ಪ್ರದೇಶಗಳಿಗೆ ಹೊಸ ರೂಪ ನೀಡಿದೆ.

ಇದೇ ಸಮಯದಲ್ಲಿ, ಉಜಾಲಾ ಯೋಜನೆಯಡಿ ಕೋಟ್ಯಾಂತರ ಮನೆಗಳಲ್ಲಿ ಎಲ್ಇಡಿ ದೀಪಗಳು ಬೆಳಗಿವೆ, ಪಿಎಂ ಉಜ್ವಲಾ ಯೋಜನೆಯಿಂದ ಶುದ್ಧ ಅಡುಗೆ ಅನೇಕ ಮನೆಗಳ ನಿತ್ಯದ ಸಂಕಷ್ಟಕ್ಕೆ ಪರಿಹಾರ ಒದಗಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಜಲಜೀವನ ಮಿಷನ್ ಮೂಲಕ ಶುದ್ಧ ನೀರು ತಲುಪಿಸುತ್ತಿದ್ದರೆ, ನಗರ ಹಾಗೂ ಹಳ್ಳಿಗಳಲ್ಲಿ ಸ್ವಚ್ಛ ಭಾರತ ಮಿಷನ್ ಪರಿಸರವನ್ನು ಸಂರಕ್ಷಿಸುತ್ತಿದೆ.

*************